ಒಂದು ಮನೆಗೆ ೫೫ ಸಾವಿರ ರೂಪಾಯಿಗಳಾಗಬಹುದೆಂದು ತಾವು ಅಂದಾಜು ಮಾಡಿದರೆ ಆ ಮನೆ ಪೂರ್ತಿಯಾಗುವಷ್ಟರಲ್ಲಿ ೭೫ ಸಾವಿರ ರೂಪಾಯಿಗಳಾಗಿಂತ್ತದೆ. ಪ್ರತಿವರ್ಷ ಕಾಸ್ಟ್ ಸಹ ಜಾಸ್ತಿಯಾಗುತ್ತಾ ಹೋಗುತ್ತದೆ. ಲ್ಯಾಂಡ್ ಅಕ್ವಿಜೇಶನ್‌ಗೆ ಕೂಡ ಜಾಸ್ತಿ ಹಣ ಕೊಡಬೇಕಾಗುತ್ತದೆ. ತಾವೇನು ಬಡವರಿಗೆ ಸಹಾಯ ಮಾಡಬೇಕೆಂದು ಹೊರಟಿದ್ದೀರೊ ಅದು ಕಾಲಕ್ಕೆ ಸರಿಯಾಗಿ ಆಗುವುದಿಲ್ಲ. ಬಡವರಿಗೆ ಅನುಕೂಲವಾಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಎಲ್ಲೆಲ್ಲಿ ಈ ರೀತಿಯ ಕಳಪೆ ಕೆಲಸಗಳು ಆಗಿವೆಯೋ ಅಲ್ಲಿ ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ಕಟ್ಟಿರತಕ್ಕಂಥ ಎಲ್ಲಾ ಮನೆಗಳು ಸಹ ಕಳಪೆ ಎಂದು ನಾನಂ ಹೇಳುವುದಿಲ್ಲ. ಎಲ್ಲೆಲ್ಲಿ ಆ ರೀತಿಯ ಕಳಪೆ ಕೆಲಸಗಳು ಆಗಿವೆಯೋ ಅದನ್ನು ನನ್ನ ಗಮನಕ್ಕೆ ಮಾನ್ಯ ಸದಸ್ಯರು ತಂದರೆ ಅಲ್ಲಿ ನಾನು ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ಇನ್ನು ದಿನೇ ದಿನೇ ಮನೆಗಳ ಬೆಲೆ ಜಾಸ್ತಿಯಾಗುತ್ತದೆಂದಂ ಹೇಳಿದರಂ ಅದನ್ನು ನಾನು ಒಪ್ಪುತ್ತೇನೆ. ಈಗ ಕಾಲಕ್ಕೆ ಸರಿಯಾಗಿ ಮನೆಗಳನ್ನು ಕಟ್ಟಬೇಕೆಂದು ಹೇಳಿದ್ದೇವೆ. ೯ ತಿಂಗಳಿಗೆ ಮಂಗಿಸಬೇಕೆಂದು ಗುತ್ತಿಗೆದಾರರಿಗೆ ತಿಳಿಸಿದ್ದರೆ ೯ ತಿಂಗಳಿಗೆ ಮಂಗಿಸಬೇಕಂ. ಈಗ ಪ್ರೈವೇಟ್‌ನವರಿಗೆ ಕೊಡುವುದನ್ನು ತಪ್ಪಿಸಿ ಲ್ಯಾಂಡ್ ಅರ್ಮಿಯವರ ಮಂಖಾಂತರ ಮಾಡಿಸಬೇಕೆಂದು ಹೇಳಿ ಅವರ ಮುಖಾಂತರ ಕೆಲಸ ಮಾಡಿಸುತ್ತಿದ್ದೇವೆ. ಮಂತ್ರಂ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿ ಕಾರ್ಪೊರೇಷನ್‌ನವರು ಮಂದೆ ಬಂದರೆ ಅವರಿಗೂ ಸಹ ಕೆಲಸ ಕೊಡುತ್ತೇವೆ. ಒಟ್ಟಿನಲ್ಲಿ ಸರ್ಕಾರದ ಉದ್ದೇಶವೆಂದರೆ ಪ್ರೈವೇಟ್‌ನವರಿಗೆ ಕೊಡುವುದನ್ನು ತಪ್ಪಿಸಬೇಕಂ. ಎಸ್ಕಲೇಶನ್ ಆಗುವುದನ್ನು ತಪ್ಪಿಸಬೇಕಂ. ಒಂದೇ ಏಜೆನ್ಸಿ ಮುಖಾಂತರ ವಿದ್ಯುಚ್ಛಕ್ತಿ ಕಲ್ಪಿಸುವುದು, ನೀರಿನ ಸೌಲಭ್ಯ ಕೊಡುವುದನ್ನೂ ಮಾಡಬೇಕೆಂದಂ ಇದ್ದೇವೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್‌ನಲ್ಲಿ ರೂಲೂ ಇಲ್ಲ ರೆಗ್ಯುಲೇಷನ್ನೂ ಇಲ್ಲ. ಅವರದೇ ಒಂದು ವ್ಯವಸ್ಥಿತವಾದ ರೂಲ್ಸ್ ಇಲ್ಲವಾಗಿದೆ. ಈ ಬೋರ್ಡ್‌ನಲಿರತಕ್ಕಂಥ ಅನೇಕ ಅಧಿಕಾರಿಗಳಂ ಬೇರೆ ಇಲಾಖೆಗಳಿಂದ ಡೆಪ್ಯೂಟೇಷನ್ ಮೇಲೆ ಬಂದವರೇ ಆಗಿದ್ದಾರೆ ಈ ಬೋರ್ಡ್‌ನಲ್ಲಿರತಕ್ಕ ಚೇರ್ಮನ್‌ರವರಿಗಾಗಲೀ ಅಥವಾ ಕಮೀಷನರವರಿಗಾಗಲೀ ಇವರುಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವ ಅಧಿಕಾರ ಇರುವುದಿಲ್ಲ. ಡೆಪ್ಯುಟೇಷನ್ ಮೇಲೆ ಅಧಿಕಾರಿಗಳನ್ನು ಈ ಬೋರ್ಡಿಗೆ ಹಾಕಬಾರದು. ಇದರಿಂದಾಗಿ ಅಲ್ಲಿ ಒಳ್ಳೆಯ ಕೆಲಸ ಮಾಡಲು ಆಗುತ್ತಿಲ್ಲ. ತನ್ನದೇ ಆದ ಸಿಬ್ಬಂದಿಯನ್ನು ಹೊಂದಿದ್ದರೆ ಅವರು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹೌಸಿಂಗ್ ಬೋರ್ಡ್‌ನವರು ತನ್ನದೇ ಆದ ಸಿಬ್ಬಂದಿಯನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ

ಅಧ್ಯಕ್ಷರು.—ಶ್ರೀ ಚಂದ್ರಶೇಖರ ಮಾವಿನಿಯವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ರೋಣ ತಾಲ್ಲೂಕಿನಲ್ಲಿ ಕುಡಿಯುವ ನೀರಂ ಸರಬರಾಜು ಯೋಜನೆ

೧೯೧೫ ಶ್ರೀ ಬಿ. ಆರ್. ಯಾವಗಲ್ (ನರಗುಂದ).— ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರೋಣ ತಾಲ್ಲೂಕಿನ ಹೊಳೆ ಆಲೂರ ಗ್ರಾಮ ಹಾಗೂ ಬೇರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಕಾರ್ಯಗತವಾಗಿ ಎಷ್ಟು ವರ್ಷಗಳಾಗಿವೆ ?

(ಆ) ಎಷ್ಟು ಹಳ್ಳಿಗಳಿಗೆ ನೀರನ್ನು ಒದಗಿಸಲಾಗಿದೆ ?

(ಇ) ಯೋಜನೆಯನ್ನು ಪೂರ್ತಿ ಮುಗಿಸದೆ ಅರ್ಧಕ್ಕೆ ಕೈ ಬಿಟ್ಟಿರಲು ಕಾರಣಗಳೇನು ? ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

(ಅ) ಏಳು ವರ್ಷಗಳಾಗಿವೆ.

(ಆ) ಎರಡು ಹಳ್ಳಿಗಳಿಗೆ ಒದಗಿಸಲಾಗಿದೆ.

(ಇ) ಯೋಜನೆಯನ್ನು ಪೂರ್ಣಗೊಳಿಸಿರುವುದರಿಂದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಈ ಯೋಜನೆಯಿಂದ ಎಷ್ಟು ಹಳ್ಳಿಗಳಿಗೆ ನೀರನ್ನು ಒದಗಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—೫ ಹಳ್ಳಿಗಳಿಗೆ ನೀರನ್ನು ಒದಗಿಸುವುದಕ್ಕೆ ಒಂದು ಸಂಯುಕ್ತ ಯೋಜನೆಯನ್ನು ಮಾಡಲಾಗಿತ್ತು. ಆದರೆ, ನೀರು ಸಾಲದೇ ಇದ್ದುದರಿಂದ ೨ ಹಳ್ಳಿಗಳಿಗೆ ಮಾತ್ರ ನೀರನ್ನು ಒದಗಿಸಲಾಗಿದೆ, ಉಳಿದಿರುವ ೩ ಹಳ್ಳಿಗಳಿಗೆ ನೀರು ಕೊಡುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ನನ್ನ ಮೂರನೇ ಪ್ರಶ್ನೆಯಲ್ಲಿ, ಯೋಜನೆಯನ್ನು ಪೂರ್ತಿ ಮುಗಿಸದೆ, ಅರ್ಧಕ್ಕೆ ಕೈಬಿಟ್ಟಿರಲು ಕಾರಣಗಳೇನು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾನು ಕೇಳಿದ್ದರೆ ಯೋಜನೆಯನ್ನು ಪೂರ್ಣಗೊಳಿಸಿರುವುದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಡಲಾಗಿದೆ. ಯೋಜನೆ ಪೂರ್ತಿ ಮಾಡಲಾಗಿದ್ದಿದ್ದರೆ ೫ ಹಳ್ಳಿಗಳಿಗೂ ನೀರನ್ನು ಏಕೆ ಕೊಡುವುದಕ್ಕೆ ಆಗಿಲ್ಲ ? ಕೇವಲ ಎರಡು ಹಳ್ಳಿಗಳಿಗೆ ಮಾತ್ರ ನೀರನ್ನು ಕೊಡಲಾಗಿದೆ. ಅಂದರೆ, ಯೋಜನೆ ಇನ್ನೂ ಮುಗಿದಿಲ್ಲವೆಂದು ಅರ್ಥವಾಗುತ್ತದೆ. ಆ ಯೋಜನೆ ನಿಲ್ಲುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಯೋಜನೆ ಮುಗಿದಿದೆ ನೀರು ಸಾಲದೇ ಇರುವುದರಿಂದ ೫ ಹಳ್ಳಿಗಳಿಗೆ ನೀರನ್ನು ಕೊಡುವುದಕ್ಕೆ ಆಗಿಲ್ಲ. ಎರಡು ಹಳ್ಳಿಗಳಿಗೆ ಮಾತ್ರ ನೀರನ್ನು ಒದಗಿಸಲಾಗಿದೆ. ಯೋಜನೆಯಲ್ಲಿ ದೋಷ ಇರಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಉಳಿದಿರುವ ಮೂರು ಹಳ್ಳಿಗಳಿಗೆ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಆರ್. ಯಾವಗಲ್.—ಇದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ವರ್ಷವೇ ನೀರನ್ನು ಕೊಡೋಣ.

ಅಧ್ಯಕ್ಷರು.—ಶ್ರೀ ಎಂ. ಎಸ್. ಕೃಷ್ಣನ್‌ರವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಅಧ್ಯಕ್ಷರು.—ಶ್ರೀ ಜಿ. ರಾಮದಾಸ್‌ರವರು,

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು.)

ಏರುತ್ತಿರುವ ಬೆಲೆಗಳು ಮತ್ತು ನಗರ ಸಭೆಗಳಿಗೆ ತುಟ್ಟಿಭತ್ಯೆಗಾಗಿ ಕೊಡುತ್ತಿರುವ ಪರಿಹಾರ

೧೪೬೬ ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ನಾಗರೀಕ ಸರಬರಾಜು ಮತ್ತು ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ನಗರ ಸಭೆಗಳಿಗೆ ಎಂದಿನಿಂದ ತುಟ್ಟಿಭತ್ಯ ಪರಿಹಾರ ಧನವನ್ನು ಕೊಡಲಾಗುತ್ತಿದೆ ಹಾಗೂ ಅದರ ಮೊತ್ತವೆಷ್ಟು ?